Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ವಾ.22/ಜೆ.ಸಿ ಉ/ಪಿಆರ್/16/2020-21

ಸಹಾಯಕ ಅಭಿಯಂತರರ ಕಛೇರಿ
ಜೆ.ಸಿ ನಗರ ಉಪವಿಭಾಗ, ಪೂರ್ವ ವಲಯ
ವಿ. ನಾಗೇನಹಳ್ಳಿ, ವಾರ್ಡ್ ನಂ: 22
ಬೆಂಗಳೂರು 560032.
ದಿನಾಂಕ: 06/02/2021

## ದಿನಾಂಕ: 06-02-2021 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:-

ಸಭೆಗೆ ಹಾಜರಿದ್ದವರು:

- ಶ್ರೀ. ರಾಮಕೃಷ್ಣರೆಡ್ಡಿ, ಕಾರ್ಯಪಾಲಕ ಅಭಿಯಂತರರು, ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀ. ರಾಜಶೇಖರ .ಎನ್ ಮಾಜಿ ಪಾಲಿಕೆ ಸದಸ್ಯರು, ವಿ. ನಾಗೇನಹಳ್ಳಿ.
- ಶ್ರೀ. ಮಂಜುನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರರು (SWM)
- ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು, ವಿ. ನಾಗೇನಹಳ್ಳಿ.
- ಶ್ರೀ. ಶಿವನಾಯಕ್, ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ
- ಶ್ರೀ. ವಿನೋದ್, ಕಂದಾಯ ವಸೂಲಿಗಾರರು
- ಶ್ರೀಮತಿ. ಉಷಾ ರಾಣಿ, ಕಲ್ಯಾಣ ಇಲಾಖೆ
- ಶ್ರೀ. ಗಂಗಾಧರಗೌಡ, ಬೆಸ್ಕಾಂ (I.E)
- ಶ್ರೀ. ಮುನಿರಾಮಣ್ಣ, ಸದಸ್ಯರು
- ಶ್ರೀ. ಲಾಜರ್, ಬಿ.ಡ್ಬ್ಯೂ.ಎಸ್.ಎಸ್.ಬಿ ಪರೀವೀಕ್ಷಕರು
- ಶ್ರೀ. ಡೇವಿಡ್ ಫೆರ್ನಾಡಿಸ್, ವಸತಿ ಸೇವಾಭಿವೃದ್ಧಿ ಸಂಘ ಸದಸ್ಯರು
- ಶ್ರೀ. ಕಾರ್ತಿಕ್, ವಸತಿ ಸೇವಾಭಿವೃದ್ಧಿ ಸಂಘ ಸದಸ್ಯರು
- ಶ್ರೀ. ಚಂದ್ ಪಾಷ, ಕೆ.ಆರ್.ಡ್ಬ್ಲ್ಯೂ.ಎ ಸದಸ್ಯರು
- ಶ್ರೀ. ನಿಶಾಂತ್ ಸೈಯದ್, ಕೆ.ಆರ್.ಡ್ಬ್ಲ್ಯೂ.ಎ ಸದಸ್ಯರು
- ಶ್ರೀ. ಶೇಕ್ ರುಮಾನ್, ವಾರ್ಡ್ ಮಾರ್ಷಲ್ , ವಿ. ನಾಗೇನಹಳ್ಳಿ
- ಶ್ರೀ. ಬೆನ್ನಿಸಬಾಸ್ಟಿನ್, ನಾಗರೀಕರು
- ಶ್ರೀಮತಿ. ಹೇಮಲತ, ನಾಗರೀಕರು

- ಶ್ರೀ. ವಿಜಯ್ ಕುಮಾರ್, ನಾಗರೀಕರು 4ನೇ 'ಬಿ' ಕ್ರಾಸ್ ಯಾಗಪ್ಪ ಲೇಔಟ್
- ಶ್ರೀಮತಿ. ಶ್ಯಾಮಲ ಗುಪ್ತ, ನಾಗರೀಕರು 4ನೇ 'ಬಿ' ಕ್ರಾಸ್ ಯಾಗಪ್ಪ ಲೇಔಟ್
- ಶ್ರೀ. ದೀಪಕ್ ಕುಮಾರ್ ಗುಪ್ತ, ನಾಗರೀಕರು 4ನೇ 'ಬಿ' ಕ್ರಾಸ್ ಯಾಗಪ್ಪ ಲೇಔಟ್
- ಶ್ರೀ. ಶಫಿ, ನಾಗರೀಕರು 4ನೇ ಕ್ರಾಸ್ ಸನ್ ರೈಸ್ ಕಾಲೋನಿ
- ಶ್ರೀ. ಜಸೆನ್ತ ಡೇವಿಡ್, ನಾಗರೀಕರು 4ನೇ ಕ್ರಾಸ್ ಸನ್ ರೈಸ್ ಕಾಲೋನಿ
- ಶ್ರೀ. ಎ.ಕೆ ಪ್ರೇಮ ಕುಮಾರ್, ನಾಗರೀಕರು 4ನೇ ಕ್ರಾಸ್ ಸನ್ ರೈಸ್ ಕಾಲೋನಿ
- ಶ್ರೀ. ಸಂದೀಪ್, ನಾಗರೀಕರು 2ನೇ ಕ್ರಾಸ್ ಸನ್ ರೈಸ್ ಕಾಲೋನಿ
- ಶ್ರೀ. ರಾಮಲಿಂಗಮ್, ನಾಗರೀಕರು
- ಶ್ರೀ. ದಾಮೋದರನ್, ನಾಗರೀಕರು
- ಶ್ರೀ. ಮುರಳಿ, ನಾಗರೀಕರು
- ಶ್ರೀಮತಿ. ಪದ್ಮಿನಿ, ನಾಗರೀಕರು
- ಶ್ರೀ. ಜಗದೀಶ್, ನಾಗರೀಕರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾರ್ಯದರ್ಶಿಗಳಾದ ಶ್ರೀ. ಗುರುಸಿದ್ದಪ್ಪ .ಜಿ ರವರು ವಾರ್ಡ್ ಸಮಿತಿ ಅಧ್ಯಕ್ಷರು, ಸಮಿತಿಯ ಸದಸ್ಯರುಗಳು ಹಾಗೂ ವಾರ್ಡ್ ಸಂಖ್ಯೆ: 22ರ ನಾಗರೀಕರು ಹಾಗೂ ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ರಾಮಕೃಷ್ಣರೆಡ್ಡಿ, ನೋಡಲ್ ಅಧಿಕಾರಿಗಳು ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು. ಹಾಗೂ ಕಮಿಟಿ ಕಾರ್ಯದರ್ಶಿಗಳು ಮಾತನಾಡುತ್ತಾ ದಿನಾಂಕ: 19/01/2021 ರಂದು ನಡೆದ ವಾರ್ಡ್ ಸಮಿತಿಯ ನಡವಳಿಗಳನ್ನು ಪುನರಾವಲೊಕನ ಮಾಡಲಾಯಿತು. ಹಿಂದಿನ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ಕುರಿತು ಈ ದಿನಾಂಕದವರೆಗೆ ನಿರ್ವಹಿಸಿದ ಕೆಲಸಗಳ ಬಗ್ಗೆ ಸದಸ್ಯರುಗಳಿಗೆ ತಿಳಿಸಲಾಯಿತು.

- ಶ್ರೀ. ಬೆನ್ನಿಸಬಾಸ್ಟಿನ್, ನಾಗರೀಕರು ಮಾತನಾಡುತ್ತಾ, ಸಿ.ಐ.ಎಲ್ ಲೇಔಟ್‌ನ ರಸ್ತೆಗಳಲ್ಲಿರುವ ಎಲೆಕ್ಟ್ರಿಕ್‌ಪೋಲ್‌ಗಳನ್ನು ಬೇರೆಕಡೆ ಸ್ಥಳಾಂತರಿಸುವಂತೆ ದೂರನ್ನು ನೀಡಿದ್ದರಿಂದ, ಈಗಾಗಲೇ ಬೆಸ್ಕಾಂ ಅಧಿಕಾರಿಗಳಿಗೆ ನೋಟೀಸ್ ಅನ್ನು ಹೊರಡಿಸಲಾಗಿದೆ. ಹಾಗೂ ಅದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳು ಸ್ಥಳಾಂತರಿಸಲು ಒಪ್ಪಿಕೊಂಡಿರುತ್ತಾರೆ ಎಂದು ನೋಡೆಲ್ ಅಧಿಕಾರಿಗಳು ತಿಳಿಸಿದರು.
- ಶ್ರೀ ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ರವರು ಮಾತನಾಡುತ್ತಾ ಕನಕನಗರದ 17ನೇ ಕ್ರಾಸ್, 18ನೇ ಕ್ರಾಸ್ ಹಾಗೂ 21ನೇ ಕ್ರಾಸ್‌ನ ವರೆಗೆ ರಸ್ತೆ ಕಾಮಗಾರಿಯನ್ನು ಪ್ರಗತಿಯಲ್ಲಿರುವ ಬಗ್ಗೆ, ನೋಡೆಲ್ ಅಧಿಕಾರಿಗಳಿಗೆ ತಿಳಿಸಿದರು.

- ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು, ರವರು ಮಾತನಾಡುತ್ತಾ, ವಾರ್ಡ್‌ನಲ್ಲಿ ಕೋವಿಡ್-19 ಪರೀಕ್ಷೆಗಳು ನಡೆಯುತ್ತಿದ್ದು, ಹಾಗೂ ಈಗಾಗಲೇ 800 ರಿಂದ 850 ಹೆಲ್ತ್ ವ್ಯಾಕ್ಸಿನೇಷನ್ ಕೊಡಲಾಗಿದೆ ಎಂದು ಸಭೆಗೆ ಹಾಜರಾಗಿದ್ದ ಸದಸ್ಯರಿಗೆ ಹೇಳಿದರು. ಹಾಗೂ ಹೆಲ್ತ್ ವ್ಯಾಕ್ಸಿನೇಷನ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಸಾರ್ವಜನಿಕರಿಗೆ ನೀಡುವುದಾಗಿ ತಿಳಿಸಿದರು.

- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಖಾತಾ ವರ್ಗಾವಣೆ, ಖಾತಾ ನೋಂದಣಿ, ತೆರಿಗೆ ಹಣ ಪಾವತಿ, ಹೊಸದಾಗಿ ಚುನಾವಣೆ ಗುರುತಿನ ಚೀಟಿ ಮಾಡುವ ಬಗ್ಗೆ ಹಾಗೂ ಇನ್ನಿತರ* ಕಂದಾಯ ಪಾವತಿಗಳ ಬಗ್ಗೆ ಸಭೆಗೆ ಹಾಜರಿದ್ದ ಕಂದಾಯ ಇಲಾಖೆಯರೊಂದಿಗೆ ಹೆಚ್ಚಿನ ಕಾರ್ಯವಿಧಾನಗಳ ಬಗ್ಗೆ ಚರ್ಚಿಸಲಾಯಿತ್ತು.

- ಶ್ರೀ. ಕಾರ್ತಿಕ್, ವಸತಿ ಸೇವಾಭಿವೃದ್ಧಿ ಸಂಘ ಸದಸ್ಯರು ಮಾತನಾಡುತ್ತಾ, ಕನಕನಗರದ 8ನೇ ಕ್ರಾಸ್ ರಸ್ತೆಗಳಲ್ಲಿ ಒಣ ಮರಗಳಿರುವುದರಿಂದ ಈಗಾಗಲೇ ಅರಣ್ಯ ಇಲಾಖೆಯವರಿಗೆ ನೋಟೀಸ್ ಅನ್ನು ನೀಡಿದ್ದು, ಅತಿ ಶೀಘ್ರದಲ್ಲಿ ಒಣಮರಗಳನ್ನು ತೆರವುಗೊಳಿಸುವುದಾಗಿ ನೋಡೆಲ್ ಅಧಿಕಾರಿಗಳು ತಿಳಿಸಿದರು. ಹಾಗೂ ಮತ್ತೊಮ್ಮೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಟೀಸ್ ನೀಡಿರುವ ಬಗ್ಗೆ ನೆನಪಿಸಲಾಗಿತ್ತು.

- ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಹೇಮಾಲತ ಎಂಬುವವರು 2018-19ನೇ ಸಾಲಿನಲ್ಲಿ ವಿದ್ಯಾರ್ಥಿ ಶುಲ್ಕ ಮರುಪಾವತಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣಾಂತರದಿಂದ ಕಲ್ಯಾಣ ಇಲಾಖೆಗೆ ತಡವಾಗಿ ಅರ್ಜಿಗಳು ಹೋಗಿರುತ್ತದೆ. ಹಾಗೂ ಕಳೆದ ಹಿಂದಿನ ಸಭೆಯಲ್ಲಿ ಕಾರ್ಯವಿಧಾನಗಳ ಬಗ್ಗೆ ಚರ್ಚಿಸಲಾಗಿದ್ದು, ಅದಕ್ಕೆ ಸಂಬಂಧಪಟ್ಟ ಕಡತವನ್ನು ಹೇಮಲತ ರವರಿಗೆ ಹಿಂತಿರುಗಿಸಿರುವುದಾಗಿ ತಿಳಿಸಿದರು. ಮುಂದುವರೆದು 2019-20ನೇ ಸಾಲಿನಲ್ಲಿ ವಿದ್ಯಾರ್ಥಿ ಮರು ಶುಲ್ಕ ಪಾವತಿಗೆ ಮರು ಹೊಸ ಅರ್ಜಿಗಳನ್ನು ವಾರ್ಡ್ ಕಮಿಟಿಯ ಮೂಲಕ ಸಲ್ಲಿಸಿರುತ್ತಾರೆ. ಹಾಗೂ ಕಡತವನ್ನು ಮರು ಸಿದ್ದಿಪಡಿಸಿ ಮೇಲಾಧಿಕರಿಗಳಿಗೆ ಕಳಿಸುವುದಾಗಿ ನೋಡೆಲ್ ಅಧಿಕಾರಿಗಳು ತಿಳಿಸಿದರು.

- ಶ್ರೀಮತಿ. ರೋಜ, ನಾಗರೀಕರು ಮಾತನಾಡುತ್ತಾ, ಸನ್ ರೈಸ್ ಕಾಲೋನಿಯಲ್ಲಿರುವ ಒಳಚರಂಡಿ ಕಾಲುವೆ ನೀರು ಮಳೆಗಾಲದಲ್ಲಿ ಬ್ಯಾಕ್ ಆಪ್ ಬರುವ ಸಂಭವವಿದೆ ಎಂದು ತಿಳಿಸಿದರು. ಈಗಾಗಲೇ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಹಾಗೂ ಕಾಮಗಾರಿ ಪ್ರಗತಿಯಲ್ಲಿರುವ ಬಗ್ಗೆ ನೋಡೆಲ್ ಅಧಿಕಾರಿಗಳು ತಿಳಿಸಿದರು.

- ಶ್ರೀ. ರವಿ, ನಾಗರೀಕರು ಮಾತನಾಡುತ್ತಾ, ಸನ್ ರೈಸ್ ಕಾಲೋನಿ ರಸ್ತೆಯಲ್ಲಿವ ಆರ್.ಸಿ.ಸಿ ಪೈಪ್ ಗಳು ಮತ್ತು ಜಮಾವಣೆಯಾಗಿರುವ, ಮಣ್ಣಿನ ಗುಡ್ಡೆಗಳನ್ನು ಬೇರೆ ಕಡೆಗೆ ಸ್ಥಳಾಂತರಿಸುವಂತೆ ಹೇಳಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಕಾಮಗಾರಿಯ ಕೆಲಸ ಬಾಕಿ ಇರುವ ಕಾರಣ ಆರ್.ಸಿ.ಸಿ ಪೈಪ್ ಗಳನ್ನು ರಸ್ತೆಯ ಪಕ್ಕದಲ್ಲಿಯೇ ಸ್ಥಳಾಂತರಿಸಲಾಗಿದ್ದು, ಹಾಗೂ ಈಗಾಗಲೇ ಮಣ್ಣಿನ ಗುಡ್ಡೆಗಳನ್ನು ಸ್ವಚ್ಛಗೊಳಿಸಲಾಗಿದೆ ಎಂದು ತಿಳಿಸಿದರು.

- ಶ್ರೀ. ಜೆಸೆನ್ತ ಡೇವಿಡ್, ನಾಗರೀಕರು ಮಾತನಾಡುತ್ತಾ, ಸನ್ ರೈಸ್ ಕಾಲೋನಿ ಕ್ರಾಸ್ ರಸ್ತೆಯಲ್ಲಿರುವ ಅಡ್ಡಮೋರಿಗಳು ತೀರಾ ಹಾಳಾಗಿದ್ದು, ಅಡ್ಡಮೋರಿಯಲ್ಲಿದ್ದ silt ಅನ್ನುತೆಗೆದು ಮೋರಿ ನೀರು ಸರಾಗವಾಗಿ ಹೋಗಲು ಅನುವು ಮಾಡಿಕೊಂಡಬೇಕೆಂದು ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಈಗಾಗಲೇ ಕಾಮಗಾರಿಯು ಪ್ರಗತಿಯಲ್ಲಿರುವ ಬಗ್ಗೆ ತಿಳಿಸಿದರು.

- ಶ್ರೀ. ವಿಜಯ್ ಕುಮಾರ್, ನಾಗರೀಕರು ಮಾತನಾಡುತ್ತಾ, ಯಾಗಪ್ಪ ಲೇಔಟ್ 4ನೇ 'ಬಿ' ಕ್ರಾಸ್ ರಸ್ತೆಯಲ್ಲಿ ಅನಧಿಕೃತವಾಗಿ ಶೆಡ್ ಹಾಕಿರುವುದರಿಂದ ಕೂಡಲೇ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿರುವುದರಿಂದ ಈಗಾಗಲೇ ಸಂಬಂಧಪಟ್ಟವರಿಗೆ ಮೌಖಿಕವಾಗಿ ತೆರವುಗೊಳಿಸಲು ಸೂಚಿಲಾಗಿದ್ದು, ಹಾಗೂ ಶೆಡ್ ಗಳನ್ನು ತೆರವುಗೊಳಿಸುವುದಾಗಿ ತಿಳಿಸಿದರು.

- ಶ್ರೀ. ಚಂದ್ ಪಾಷ. ಕೆ.ಆರ್.ಡ್ಬ್ಲ್ಯೂ.ಎ ಸದಸ್ಯರು ಮಾತನಾಡುತ್ತಾ, ಕನಕನಗರದಲ್ಲಿ 1ನೇ 'ಬಿ' ಮೇನ್ ರಸ್ತೆಯಲ್ಲಿ street light ಇಲ್ಲದೇ ಇರುವುದರಿಂದ ಕೂಡಲೇ ಸಂಬಂದಪಟ್ಟ ಅಧಿಕಾರಿಗಳಿಗೆ ತಿಳಿಸಿ street light ಗಳನ್ನು ಹಾಕಸಬೇಕೆಂದು ಹೇಳಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳನ್ನು ಈಗಾಗಲೇ ಸರಿಪಡಿಸಿರುವುದಾಗಿ ತಿಳಿಸಿದರು.

- ಶ್ರೀ. ಜಗದೀಶ್, ನಾಗರೀಕರು ಮಾತನಾಡುತ್ತಾ 8ನೇ 'ಎ' ಸನ್ ರೈಸ್ ಕಾಲೋನಿ ರಸ್ತೆಯಲ್ಲಿ ಒಳಚರಂಡಿ ಸಮಸ್ಯೆ ಇರುವುದರಿಂದ ಬಿ.ಡ್ಬ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತಿಳಿಸಿ ಶ್ರೀಘ್ರವಾಗಿ ಸರಿಪಡಿಸುವಂತೆ ತಿಳಿಸಿದರು.

- ಹಾಗೂ ಸಿ.ಐ.ಎಲ್ ಲೇಔಟ್ ನಲ್ಲಿ Eletrical pole ಅನ್ನು ಸ್ಥಳಾಂತರಿಸುವ ಬಗ್ಗೆ ಸಿ4 ನ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಪತ್ರವನ್ನು ಬರೆಯಲು ತಿಳಿಸಿದರು.

- ಶ್ರೀ ಕಮಲ್, ನಾಗರೀಕರು ಮಾತನಾಡುತ್ತಾ, ಕನಕನಗರದ 2ನೇ 'ಎ' ಕ್ರಾಸ್ ರಸ್ತೆಯಲ್ಲಿ street light ಹಾಳಾಗಿದ್ದು, ಅದಕ್ಕೆ ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿ street light ಗಳನ್ನು ಸರಿಪಡಿಸುವಂತೆ ತಿಳಿಸಿದರು.

- ಶ್ರೀ ವಿಜಯ್, ನಾಗರೀಕರು ಮಾತನಾಡುತ್ತಾ, ಯಾಗಪ್ಪ ಲೇಔಟ್ ನ ಪ್ರಭಾಕರ್ ಬಡಾವಣೆಯಲ್ಲಿ ಬೋರ್ ವೇಲ್ ರಿಪೇರಿಯಾಗಿದ್ದು, ಸಭೆಗೆ ಹಾಜರಿದ್ದ ಬಿ.ಡ್ಬ್ಯೂ.ಎಸ್.ಎಸ್.ಬಿ ಪರೀವೀಕ್ಷರಿಗೆ ಶ್ರೀಘ್ರವಾಗಿ ಸರಿಪಡಿಸುವಂತೆ ತಿಳಿಸಿದರು.

- ಕನಕನಗರದ 8ನೇ ಕ್ರಾಸ್ ರಸ್ತೆಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಪ್ರಾರಂಭಿಸಲು ತಿಳಿಸಲಾಗಿತ್ತು. ಆದರೆ ಕೋರ್ಟ್ ನಲ್ಲಿ ಕೇಸ್ ಇರುವುದರಿಂದ ಮೊದಲು ಸ್ಥಳವನ್ನು ಪರೀಶೀಲಿಸಿ ತದನಂತರ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ತಿಳಿಸಿದರು.

- ಶ್ರೀ ಮುರಳಿ, ನಾಗರೀಕರು ಮಾತನಾಡುತ್ತಾ, ಸನ್ ರೈಸ್ ಕಾಲೋನಿಯ 2ನೇ ಕ್ರಾಸ್ ರಸ್ತೆಯಲ್ಲಿ ಕೆ.ಇ.ಬಿ ಲೈನ್ ವೈಯರ್ ಸಮಸ್ಯೆ ಇರುವುದರಿಂದ ಅದಕ್ಕೆ ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿ ಸರಿಪಡಿಸಬೇಕೆಂದು ತಿಳಿಸಿದರು.

- ಶ್ರೀಮತಿ ಹೇಮಲತ , ನಾಗರೀಕರವರು ಮಾತನಾಡುತ್ತಾ, ವೃದ್ಧಾಪ್ಯ ಪಿಂಚಣಿ ಹಾಗೂ ವಿಧಾವ ವೇತನ ಬಗ್ಗೆ ಅದಕ್ಕೆ ಸಂಬಂಧಪಟ್ಟ ತಹಸೀಲ್ದಾರ್ ಅಧಿಕಾರಿಗಳಿಗೆ ಪತ್ರವನ್ನು ಬರೆಯಲು ತಿಳಿಸಿದರು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡ ಭಾವಚಿತ್ರ ಹಾಗೂ ಲಿಖಿತ ವರದಿ ತಯಾರಿಸಿಕೊಂಡು ಹಾಜರಾಗಲು ಸೂಚಿಸಿ ಹಾಗೂ ಹಾಜರಾಗದೇ ಇರುವ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಿರಬೇಕೆಂದು ಸೂಚಿಸಿದರು. ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಕಾರ್ಯದರ್ಶಿಗಳಾದ ಗುರುಸಿದ್ದಪ್ಪ .ಜಿ ರವರ ವಂದನಾರ್ಪಣೆಯೊಂದಿಗೆ ಮದ್ಯಾಹ್ನ 12:45ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ರಾಮಕೃಷ್ಣರೆಡ್ಡಿ)
ವಾರ್ಡ್ ಸಮಿತಿ ಅಧ್ಯಕ್ಷರು

(ಗುರುಸಿದ್ದಪ್ಪ .ಜಿ)
ವಾರ್ಡ್ ಸಮಿತಿ ಕಾರ್ಯದರ್ಶಿ
ಮತ್ತು
ಸಹಾಯಕ ಅಭಿಯಂತರರು ವಾರ್ಡ್ ನಂ:22